# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮುಳಬಾಗಿಲು

## ಸಿಸಿ.ಸಂಖ್ಯೆಃ 85/2018

ಪಿರ್ಯಾದುದಾರರು ಃ- ಮುಳಬಾಗಿಲು ಗ್ರಾಮಾಂತರ ಪೊಲೀಸ್ ಠಾಣೆ

ವಿರುದ್ಧ

ಆರೋಪಿ ಃ- 2) ಡಿ.ಎನ್ ರೆಡ್ಡಪ್ಪ ಬಿನ್ ನಾರಾಯಣಪ್ಪ,
33 ವರ್ಷ ವಯಸ್ಸು, ರೆಡ್ಡಿ ವೈನ್ಸ್ ಅಂಗಡಿಯ ಮಾಲೀಕರು,
ವಾಸಃ ತಾಯಲೂರು ಗ್ರಾಮ, ಮುಳಬಾಗಿಲು ತಾಲ್ಲೂಕು.

## ಃ ದೋಷಾರೋಪಣೆ ಃ

ಶ್ರೀ ಈಶ್ವರ, ಬಿ.ಕಾಂ, ಎಲ್.ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಮುಳಬಾಗಿಲು ಆದ ನಾನು ಈ ಮೂಲಕ ಆಪಾದಿತರಾದ ನಿಮ್ಮ ಮೇಲೆ ಹೊರೆಸುವ ದೋಷಾರೋಪಣೆ.

ದಿನಾಂಕಃ 19.07.2017 ರಂದು ರಾತ್ರಿ ಸುಮಾರು 7.45 ರಿಂದ 8.45 ರ ಗಂಟೆಯ ಸಮಯದಲ್ಲಿ, ಮುಳಬಾಗಿಲು ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪಿಯ ಅಪ್ಪೇನಹಳ್ಳಿ ಗ್ರಾಮದ 1ನೇ ಆರೋಪಿಯ ತೋಟದ ಮನೆಯ ಬಳಿ ಅನಧೀಕೃತವಾಗಿ ರೂ. 1960/- ಬೆಲೆ ಬಾಳುವ ಮದ್ಯವಾದ ರಾಜಾ ವಿಸ್ಕೀ 90 ಎಂ.ಎಲ್ ನ 36 ಟೆಟ್ರಾ ಪ್ಯಾಕ್‌ಗಳು, 8 ಪಿ.ಎಂನ 180 ಎಂ.ಎಲ್ 5 ಪಾಕೆಟ್‌ಗಳು, ಓಲ್ಡ್ ಟವರಿನ್ 180 ಎಂ.ಎಲ್‌ನ 6 ಮದ್ಯದ ಪಾಕೆಟ್‌ಗಳು ದೊರೆತಿದ್ದು, 2ನೇ ಆರೋಪಿಯಾದ ನೀವು ತಾಯಲೂರಿನ ರೆಡ್ಡಿ ವೈನ್ಸ್ ಮಾಲೀಕರಾಗಿದ್ದು 1ನೇ ಆರೋಪಿಯು ಯವುದೇ ಪರವಾನಗಿ ಇಲ್ಲದೆ ಅನಧೀಕೃತವಾಗಿ ಸದರಿ ಮದ್ಯವನ್ನು ಮಾರಾಟ ಮಾಡುವ ಉದ್ದೇಶದಿಂದ ನಿಮ್ಮ ಮಾಲೀಕತ್ವದಲ್ಲಿನ ತಾಯಲೂರು ಗ್ರಾಮದ ರೆಡ್ಡಿ ವೈನ್ಸ್ ಅಂಗಡಿಯಿಂದ ತಂದು ಅಕ್ರಮವಾಗಿ ಶೇಖರಿಸಿಟ್ಟುಕೊಂಡಿದ್ದು, ಆ ಮೂಲಕ ನೀವು ಕಲಂ 32 ಮತ್ತು 34 ಕರ್ನಾಟಕ ಅಬಕಾರಿ ಕಾಯ್ದೆಯಡಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಆದ್ದರಿಂದ ನೀನು ಈ ಮೇಲೆ ಹೇಳಿದ ಆರೋಪಿಯು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುತ್ತಿದ್ದು ಮೇಲ್ಕಂಡ ದಂಡನೀಯ ಅಪರಾಧಗಳ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಒಳಪಡತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ 21ನೇ ಫೆಬ್ರವರಿ – 2023.

ಸಹಿ/-
**(ಈಶ್ವರ)**
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಮುಳಬಾಗಿಲು.